# ● ಸುದ್ದಿ ಸಂಚಯ ●

## ಶ್ರೀರಾಮಕೃಷ್ಣರು ಮತ್ತು ವಿಶ್ವರಂಗದಲ್ಲಿ ಭಾರತದ ಪ್ರತಿಭಾಸ್ಪರ್ಶ



*ಸಂಗೀತ ನಿರ್ದೇಶಕ ಫಿಲಿಪ್ ಗ್ಲಾಸ್, ಶ್ರೀಮತಿ ಕುಸುಮಿತಾ, ಸ್ವಾಮಿ ಇಷ್ಟಾನಂದ, ಸ್ವಾಮಿ ಆತ್ಮರೂಪಾನಂದ ಹಾಗೂ ಇತರ ಅಭಿಮಾನಿಗಳು*

The Passion of Ramakrishna—*ಶ್ರೀರಾಮಕೃಷ್ಣರ ಕೊನೆಯ ದಿನಗಳು* ಎಂಬ ಒಂದು ಸಂಗೀತ-ನಾಟಕ ಪ್ರಸಂಗವನ್ನು ೨೦೦೬ರ ಸೆಪ್ಟೆಂಬರ್ ೧೬ರಂದು ಅಮೆರಿಕದ ಕೋಸ್ಟಾ ಮೆಸಾ ಎಂಬಲ್ಲಿ Orange County Performing Arts Center ನಲ್ಲಿ ಪ್ರದರ್ಶಿಸಲಾಯಿತು. ಅಂತಾರಾಷ್ಟ್ರೀಯ ಪ್ರಸಿದ್ಧಿಯನ್ನು ಗಳಿಸಿರುವ ಸಂಗೀತ ನಿರ್ದೇಶಕ ಫಿಲಿಪ್ ಗ್ಲಾಸ್ (Phillip Glass) ಹಾಗೂ ಇದರ ಸಾಹಿತ್ಯವನ್ನು ರಚಿಸಿರುವ ಕುಸುಮಿತಾ ಪೆಡರ್ಸನ್ (Kusumita Pedersen)ಇವರಿಬ್ಬರ ಪರಿಶ್ರಮದಿಂದ ಇದು ಸಾಧ್ಯವಾಯಿತು. ಇವರೊಂದಿಗೆ ಅಲ್ಲಿನ ಪ್ರಸಿದ್ಧ ವಾದ್ಯಸಂಗೀತದ ತಂಡಗಳು ಸಹಕರಿಸಿದವು. ಈ ಪ್ರಸಂಗವು ಮುನ್ನುಡಿ, ಶ್ರೀರಾಮಕೃಷ್ಣರ ದರ್ಶನಗಳು, ಶ್ರೀಮಾತೆ ಶಾರದಾ ದೇವಿ, ಶ್ರೀರಾಮಕೃಷ್ಣರ ಕೊನೆಯ ದಿನಗಳು, ಅವರ ಮಹಾಸಮಾಧಿ ಹಾಗೂ ಅಂತಿಮ ಸಂದೇಶಗಳನ್ನು ಒಳಗೊಂಡಿದೆ. ಶ್ರೀರಾಮಕೃಷ್ಣ ವಚನವೇದವನ್ನು (The Gospel of Sri Ramakrishna) ಸತತವಾಗಿ ನಲವತ್ತು ವರ್ಷಗಳಿಂದ ಅಧ್ಯಯನ ಮಾಡುತ್ತಿರುವ ಕುಸುಮಿತಾರವರು ಇದರ ರೂವಾರಿ. ಈ ಪ್ರಸ್ತುತಿಯು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದ್ದು, ಇದರ ಬಗ್ಗೆ ಬಹಳಷ್ಟು ಪ್ರಶಂಸೆ ಪ್ರಕಟವಾಗಿದೆ. ಮಿ. ಗ್ಲಾಸ್‌ರವರು ಈ ಸಂಗೀತ ನಾಟಕ ಪ್ರಸಂಗದ ಉದ್ದೇಶವನ್ನು ಕುರಿತು ಹೀಗೆ ಹೇಳುತ್ತಾರೆ:

"ವಿಶ್ವರಂಗದಲ್ಲಿ ಭಾರತವು ಶ್ರೀರಾಮಕೃಷ್ಣರ ಪ್ರಖರವಾದ ಪ್ರತಿಭಾಸ್ಪರ್ಶವಿಲ್ಲದೆ ವಿಜೃಂಭಿಸಿತು ಎಂಬುದನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ. ಅತ್ಯಂತ ಹೆಚ್ಚಿನ ಜನಸಂಖ್ಯೆಯಿಂದ ಕೂಡಿರುವ ಹಾಗೂ ಸೃಜನಶೀಲತೆ ಮತ್ತು ಉತ್ಸಾಹಗಳಿಂದ ಪುಟಿಯುತ್ತಿರುವ ಭಾರತವು, ಅತ್ಯಂತ ಸರಳವಾದ ಜೀವನ ನಡೆಸಿ, ಬಹುಕಾಲದ ಹಿಂದೆ ಕಣ್ಮರೆಯಾದ ಒಬ್ಬ ಸಂತನಿಗೆ ಇಷ್ಟರಮಟ್ಟಿಗೆ ಋಣಿಯಾಗಿದೆ ಎಂಬುದನ್ನು ಕೆಲವರು ನಂಬದೇ ಹೋಗಬಹುದು. ಆದರೆ ಅದು ವಾಸ್ತವಾಂಶ ಎಂಬುದು ನನ್ನ ನಂಬಿಕೆ.

"ಮಹಾಪುರುಷನೊಬ್ಬನು ತೀರಿಕೊಂಡಾಗ, ಇಡೀ ಮಾನವತೆ, ಏಕೆ ಇಡೀ ಜಗತ್ತು ಒಂದು ಸುಂದರ, ಕಾಲರಹಿತ ಸೂರ್ಯಾಸ್ತವನ್ನು ನೋಡಿದ ಅನುಭವವನ್ನು ಪಡೆಯುತ್ತದೆ ಎಂದು ಹೇಳಲಾಗಿದೆ. ಆ ಕ್ಷಣದಲ್ಲಿ 'ಜೀವನ ಮತ್ತು ಮೃತ್ಯು'ಗಳ ಮಹತ್ತಾದ ಅಂಶ ತೆರೆದುಕೊಳ್ಳುತ್ತದೆ. ಅದನ್ನು ವಿವರಿಸುವುದಾಗಲಿ, ಅರ್ಥಮಾಡಿಕೊಳ್ಳುವುದಾಗಲಿ ಸಾಧ್ಯವಾಗದೇ ಹೋಗಬಹುದು. ಆ ಘಟನೆಗೆ ಸಾಕ್ಷಿಯಾದಾಗ ನಾವು, ಬಹುಶಃ ನಾವು ನಮ್ಮ ಮರ್ತ್ಯ ಸ್ವರೂಪವನ್ನು, ಅದರ ಇತಿಮಿತಿಗಳನ್ನು, ಅದರ ಸಾಧ್ಯತೆಗಳನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಶ್ರೀರಾಮಕೃಷ್ಣರನ್ನು ಕುರಿತ ಅತ್ಯಂತ ಸಂಕ್ಷೇಪವಾದ ಈ ನಾಟಕವು, ರಾಮಕೃಷ್ಣರ ಬದುಕಿನ ಕೊನೆಯ ತಿಂಗಳುಗಳಲ್ಲಿ ಅವರು ಅನುಭವಿಸಿದ ಯಾತನೆ, ಅವರ ಅಂತಿಮ ಕ್ಷಣಗಳು, ಇವುಗಳು ಹಂತಹಂತವಾಗಿ ತೆರೆದುಕೊಳ್ಳುವುದನ್ನು ತೋರಿಸುತ್ತದೆ."

### ವಿವೇಕಾನಂದ ಪುರಸ್ಕಾರ

ಆಧುನಿಕ ರಷ್ಯಾ ಹಾಗೂ ಹಿಂದಿನ ಸೋವಿಯತ್ ಒಕ್ಕೂಟದಲ್ಲಿ ಸ್ವಾಮಿ ವಿವೇಕಾನಂದರ ವಿಚಾರಗಳನ್ನು ಹಾಗೂ ಭಾರತೀಯ ತತ್ತ್ವಶಾಸ್ತ್ರವನ್ನು ಪ್ರಸಿದ್ಧಗೊಳಿಸುವಲ್ಲಿ ಅಪ್ರತಿಮ ಕೆಲಸವನ್ನು ಮಾಡಿರುವ ಡಾ. ವ್ಲಾದಿಸ್ಲಾವ್ ಸರ್ಗೇವಿಚ್ ಕೊಸ್ತ್ಯುಷೆಂಕೊ (Dr. Vladislav Sergeyevich Kostyuchenko) ಅವರಿಗೆ ಕೊಲ್ಕತಾದ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್ ೨೦೦೬ ಆಗಸ್ಟ್ ೬ರಂದು ವಿವೇಕಾನಂದ ಪುರಸ್ಕಾರವನ್ನು ನೀಡಿ ಗೌರವಿಸಿದೆ. ೧೯೫೪ರಲ್ಲಿ ಜನಿಸಿದ ಈತ ಮಾಸ್ಕೋ ಸ್ಟೇಟ್ ವಿಶ್ವವಿದ್ಯಾನಿಲಯದ ವಿದೇಶೀ ತತ್ತ್ವಶಾಸ್ತ್ರ ಇತಿಹಾಸ ವಿಭಾಗದ ಪ್ರಾಧ್ಯಾಪಕರಾಗಿದ್ದರು. ಇವರು ಭಾರತೀಯ ತತ್ತ್ವಶಾಸ್ತ್ರದಲ್ಲಿ ಪರಿಣತರೆಂದು ರಷ್ಯಾ ದೇಶದಲ್ಲಿ ಪ್ರಖ್ಯಾತರಾಗಿದ್ದಾರೆ. ಅಲ್ಲದೆ ರಷ್ಯನ್ ಭಾಷೆಯಲ್ಲಿ *Integral Vedanta, Vivekananda,*



ಪ್ರಶಸ್ತಿ ಪ್ರದಾನ ಸಮಾರಂಭ. ಎಡದಿಂದ, ಸ್ವಾಮಿ ಪ್ರಭಾನಂದಜಿ, ಶ್ರೀ ಕನ್ವಲ್ ಸಿಬಾಲ್ ಮತ್ತು ಡಾ. ವ್ಲಾದಿಸ್ಲಾವ್ ಸರ್ಗೇವಿಚ್ ಕೊಸ್ತ್ಯುಪೆಂಕೊ

*Classical Vedanta and Neo-Vedanta* ಹಾಗೂ *Sri Aurobindo: Multiplicity of Heritage and Unity of Thought* ಎಂಬ ಗ್ರಂಥಗಳನ್ನು ೧೯೭೦, ೭೭, ೮೪ ಹಾಗೂ ೯೮ರಲ್ಲಿ ಅನುಕ್ರಮವಾಗಿ ರಚಿಸಿದ್ದಾರೆ. ರಷ್ಯಾದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ಕನ್ವಲ್ ಸಿಬಾಲ್ ಅವರು ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಕಾರ್ಯದರ್ಶಿಗಳಾದ ಸ್ವಾಮಿ ಪ್ರಭಾನಂದರ ಸಮ್ಮುಖದಲ್ಲಿ ಮಾಸ್ಕೊದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಈ ವಿವೇಕಾನಂದ ಪುರಸ್ಕಾರವನ್ನು ನೀಡಿದರು. ಪ್ರಶಸ್ತಿಪತ್ರ, ವಿವೇಕಾನಂದರ ಒಂದು ಭಾವಚಿತ್ರ ಹಾಗೂ ಒಂದು ಲಕ್ಷ ರೂ.ಗಳ ಗೌರವಧನವನ್ನು ಈ ಪುರಸ್ಕಾರ ಒಳಗೊಂಡಿದೆ.

---

## ಮನನ–ಮಾನ್ಯ

ಸಂಗ್ರಹ : ಮಧುಪ

ತೈತ್ತಿರೀಯ ಉಪನಿಷತ್ತಿನಲ್ಲಿ ಭೃಗುವಿಗೆ ಅವನ ತಂದೆ ಹೇಳುತ್ತಾರೆ: ಅಮೂಲ್ಯವಾದ ಈ ನಾಲ್ಕು ಸೂತ್ರಗಳನ್ನು ಪಾಲಿಸು–

೧. **ಅನ್ನಂ ನ ನಿಂದ್ಯಾತ್ ತದ್ ವ್ರತಂ:** ಊಟ ಮಾಡುವ ಆಹಾರವನ್ನು ದೂಷಿಸಬಾರದು. ಕೈಕಾಲು ತೊಳೆದು ಪರಿಶುದ್ಧವಾದ ಮನಸ್ಸಿನಿಂದ, ಕೆಟ್ಟ ಯೋಚನೆ, ಕೆಟ್ಟ ಭಾವನೆ, ಚಿಂತೆ, ಸಂದೇಹ, ಆತುರಗಳಿಲ್ಲದೆ ದೇವರನ್ನು ಸ್ಮರಿಸುತ್ತ, ಸಂತೋಷವಾಗಿ ಊಟ ಮಾಡಬೇಕು. ಇದು ಶುದ್ಧವಾದ ಆಹಾರ, ಪವಿತ್ರವಾದುದು, ದೇವರ ಪ್ರಸಾದ; ಇದು ಜೀರ್ಣವಾಗಿ ನನಗೆ ಆರೋಗ್ಯವನ್ನು ಉಂಟುಮಾಡಲಿ. ಶಕ್ತಿಯನ್ನು ಕೊಡಲಿ, ಭಗವದರ್ಪಿತವಾಗಲಿ ಎಂದು ಹೇಳಿಕೊಂಡು ಊಟವನ್ನಾರಂಭಿಸು.

೨. **ಅನ್ನಂ ನ ಪರಿಚಕ್ಷೀತ ತದ್ ವ್ರತಂ** : ಆಹಾರವನ್ನು ಚೆಲ್ಲಬೇಡ. ಹಾಳುಮಾಡಬೇಡ. ಒತ್ತಾಯ ಮಾಡಿ ಬಡಿಸಬಾರದು. ಹೆಚ್ಚಾಗಿ ಹಾಕಿಸಿಕೊಂಡು ತಿನ್ನುವುದಕ್ಕಾಗದೆ ಬಿಸಾಡಬಾರದು.

೩. **ಅನ್ನಂ ಬಹು ಕುರ್ವೀತ ತದ್ ವ್ರತಂ** : ಆಹಾರ ಕೇವಲ ನಿನಗಾಗಿ ಮಾತ್ರವಲ್ಲ. ಆಹಾರವನ್ನು ಹೇರಳವಾಗಿ ಉತ್ಪಾದನೆ ಮಾಡು. ಸಮೃದ್ಧಿಯಿದ್ದರೆ ಎಲ್ಲರಿಗೂ ಆಹಾರ ದೊರೆಯುತ್ತದೆ. ಅತಿ ಆಸೆಪಟ್ಟು ಬೇರೆಯವರಿಗೆ ಸಿಕ್ಕದಂತೆ ಆಹಾರವನ್ನು ಸಂಗ್ರಹಿಸಿಡಬೇಡ.

೪. ನ ಕಂಚನ ವಸತೌ ಪ್ರತ್ಯಾಚಕ್ಷೀತ ತದ್ ವ್ರತಂ : ಅನ್ನ ಇಲ್ಲ, ವಸತಿ ಇಲ್ಲ ಎಂದು ಕೇಳಿಕೊಂಡು ಬಂದ ಯಾರನ್ನೂ ನಿರಾಸೆಗೊಳಿಸಬೇಡ. ಇರುವುದನ್ನು ಅವರೊಂದಿಗೆ ಹಂಚಿಕೊ. ಮೈಗಳ್ಳತನ ಇಲ್ಲದೆ ದುಡಿದರೆ, ಸ್ವಾರ್ಥಕ್ಕೆಂದು ಸಂಗ್ರಹಿಸಿ ಬಚ್ಚಿಡದಿದ್ದರೆ, ಎಲ್ಲರಿಗೂ ಸಾಕಾಗುವಷ್ಟು, ಬೇಕಾದಷ್ಟು ಕೂಡ, ಆಹಾರ ದೊರೆಯುತ್ತದೆ.

ಉಣ್ಣುವ ಆಹಾರದಲ್ಲಿ ದೋಷವನ್ನೆಣಿಸಬೇಡ; ಆಹಾರವನ್ನು ವ್ಯರ್ಥವಾಗಿ ಬಿಸಾಡಬೇಡ; ಆಹಾರವನ್ನು ಹೇರಳವಾಗಿ ಉತ್ಪಾದಿಸು; ಹಸಿದವರಿಗೆ ಅನ್ನವನ್ನು, ಬೇಡಿಬಂದವರಿಗೆ, ನಿರಾಶ್ರಿತರಿಗೆ ತತ್ಕಾಲಕ್ಕಾದರೂ ಸ್ಥಳಾವಕಾಶವನ್ನು, ಆಹಾರವನ್ನು ನಿನಗಿರುವುದರಲ್ಲಿಯೆ ಕೊಂಚ ಕೊಟ್ಟು ಸತ್ಕರಿಸು. ಯಾರಿಗೂ ಇಲ್ಲ ಎನ್ನಬೇಡ.

### ಆಶ್ರಮದ ವಿಶೇಷ ಉತ್ಸವದ ದಿನಗಳು

ಜನವರಿ ೨೦೦೭

| | | |
|---|---|---|
| ಕಲ್ಪತರು ದಿವಸ | ಸೋಮವಾರ | ೦೧ |
| ಸ್ವಾಮಿ ತುರೀಯಾನಂದ ಜಯಂತಿ | ಮಂಗಳವಾರ | ೦೨ |
| ಸ್ವಾಮಿ ವಿವೇಕಾನಂದ ಜಯಂತಿ | ಬುಧವಾರ | ೧೦ |
| ಏಕಾದಶಿ | ಸೋಮವಾರ | ೧೫ |
| ಸ್ವಾಮಿ ಬ್ರಹ್ಮಾನಂದ ಜಯಂತಿ | ಶನಿವಾರ | ೨೦ |
| ಸ್ವಾಮಿ ತ್ರಿಗುಣಾತೀತಾನಂದ ಜಯಂತಿ | ಸೋಮವಾರ | ೨೨ |
| ಏಕಾದಶಿ | ಸೋಮವಾರ | ೨೯ |